**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

**(ಚಾ.ಸಾ.13/ಪ್ರಾ.ಸಾ.9)**

ತಾಃ 03.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಶಿವರಾಜು |
| ತಂದೆಯ ಹೆಸರು | ಸಿದ್ಧಲಿಂಗೇ ಗೌಡ |
| ವಯಸ್ಸು | 31 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ನಾಗರಭಾವಿ, ಬೆಂಗಳೂರು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿರುತ್ತೇನೆ. 2018 ನೇ ಸಾಲಿನಲ್ಲಿ ಪೊಲೀಸರು ನನ್ನ ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ಚಾಸಾ.24 ರವರು ಹಾಜರಿದ್ದು ಠಾಣೆಯಲ್ಲಿ ಇದ್ದ ಆರೋಪಿಯನ್ನು ತೋರಿಸಿ ಆರೋಪಿ ಈ ರೀತಿ ಕೃತ್ಯ ಮಾಡಿದ್ದು ಪಂಚನಾಮೆ ಮಾಡಬೇಕಾಗಿದ್ದು ಸಹಕರಿಸುವಂತೆ ನನಗೆ ತಿಳಿಸಿದ್ದರು. ಆರೋಪಿ ಆ ಸಮಯದಲ್ಲಿ ಪೊಲೀಸರ ಮುಂದೆ ಒಂದು ಚಿನ್ನದ ಮಾಂಗಲ್ಯ ಸರದ ಪೀಸ್ ಅನ್ನು ಪೇಪರ್ ನಲ್ಲಿ ಸುತ್ತಿ ತನ್ನ ಮನೆಯಲ್ಲಿ

ಇಟ್ಟಿದ್ದು ಅದನ್ನು ತೋರಿಸುವುದಾಗಿ ಪೊಲೀಸರ ಮುಂದೆ ಹೇಳಿದ್ದರು. ಅದರಂತೆ ಆರೋಪಿ ಯಶವಂತಪುರದ ಮುತ್ತ್ಯಾಲ ನಗರದಲ್ಲಿ ಇರುವ ತನ್ನ ಮನಗೆ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಆರೋಪಿ ತನ್ನ ಮನೆಯ ಒಳಗೆ ಹೋಗಿ ಅಲ್ಮೆರಾದ ಮೇಲೆ ಇಟ್ಟಿದ್ದ ಪೇಪರ್ ನಲ್ಲಿ ಸುತ್ತಿದ್ದ ಚೈನ್ ಅನ್ನು ತೆಗೆದು ತೋರಿಸಿರುತ್ತಾರೆ.

2. ಆರೋಪಿ ಚಿನ್ನದ ಚೈನ್ ತೋರಿಸಿದ ನಂತರ ಪೊಲೀಸರು ನಮಗೆ ವಿವರಣೆ ನೀಡಿ ಬರವಣಿಗೆ ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿದಾರರು ನಿ.ಪಿ.6 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ನಾನು ವಜಜರ್ ಗೆ ಸಹಕರಿಸಿದ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ಆ ದಿನ ಪೊಲೀಸರು ವಶಪಡಿಸಿಕೊಂಡ ಮಾಂಗಲ್ಯ ಸರದ ಪೀಸ್ ಅನ್ನು ನೋಡಿದಲ್ಲಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.7 ಎಂದು ಗುರುತಿಸಿರುತ್ತದೆ.

<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎ.ಆರ್. ವಕೀಲರಿಂದಃ</u>

3. ದಿಃ26.12.2018 ರಂದು ಸೋಲದೇವನಹಳ್ಳಿ ಇರುವ ನನ್ನ ಸ್ನೇಹಿತನನ್ನು ನಾನು ಭೇಟಿ ಮಾಡಲು ಹೋದಾಗ ಪೊಲೀಸರು ನನ್ನನ್ನು ಕರೆದಿದ್ದರು. ಪೊಲೀಸರು ನನ್ನನ್ನು ಕರೆದಾಗ ಅಂದಾಜು ಬೆಳಿಗ್ಗೆ 10.30 ರಿಂದ 11.00 ಗಂಟೆ

ಸಮಯ ಆಗಿತ್ತು. ನನಗೆ ಪೊಲೀಸರ ಪರಿಚಯ ಇಲ್ಲ. ನಾನು ಆ ದಿನ ಠಾಣೆಯ ಮುಂಭಾಗ ಹೋಗುವಾಗ ಪೊಲೀಸರು ನನ್ನನ್ನು ಕರೆದಿರುತ್ತಾರೆ. ಪೊಲೀಸರು ನಿಮಗೆ ಏನಾದರೂ ನೊಟೀಸ್ ನೀಡಿರುತ್ತಾರಾ ಎಂದರೆ ಸಾಕ್ಷಿಯು ಪೊಲೀಸರು ಮಹಜರ್ ಗೆ ಸಹಕರಿಸುವಂತೆ ಹೇಳಿದ ನಂತರ ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ನನಗೆ ಪೊಲೀಸರು ಬರುವಂತೆ ಕರೆದ 5 ನಿಮಿಷದಲ್ಲಿ ನಾನು ಹತ್ತಿರದಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೇನು. ಚಿಕ್ಕಬಾಣಾವರದಿಂದ ಸೋಲದೇವನಹಳ್ಳಿ ಪೊಲೀಸ್ ಠಾಣೆಗೆ ಹೋಗಲು 10 ನಿಮಿಷ ಸಮಯ ಬೇಕಾಗಿದ್ದು ನಿಖರವಾಗಿ ಎಷ್ಟು ಸಮಯ ಆಗುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಅಂದಾಜು ಬೆಳಿಗ್ಗೆ 10.30 ರಿಂದ 11.00 ಗಂಟೆ ಸಮಯ ಆಗಿತ್ತು.

4. ನಾವು ಠಾಣೆಯಿಂದ ಹೊರಟಾಗ 11.00 ಗಂಟೆ ಸಮಯ ಆಗಿದ್ದು ಸದರಿ ಸ್ಥಳಕ್ಕೆ ಹೋಗುವಾಗ ಅಂದಾಜು ಬೆಳಿಗ್ಗೆ 11.30 ಸಮಯ ಆಗಿತ್ತು. ನಾವು ಹೋದಂತಹ ಸ್ಥಳದ ಮುಂಭಾಗ ಖಾಲಿ ಜಾಗ ಇದ್ದು, ಹಿಂಭಾಗದಲ್ಲಿ ಅಪಾರ್ಟ್ ಮೆಂಟ್ ಇದ್ದು, ಎಡ ಹಾಗೂ ಬಲ ಭಾಗದಲ್ಲಿ ಖಾಲಿ ಜಾಗ ಇತ್ತು. ನಾನು ಸದರಿ ಮನೆಯ ಒಳಗೆ ಹೋಗಿದ್ದೇನು. ಸದರಿ ಮನೆಯಲ್ಲಿ ಎಷ್ಟು ಕೋಣೆಗಳು ಇತ್ತು, ಬಾಗಿಲು ಯಾವ ದಿಕ್ಕಿನಲ್ಲಿ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಮನೆಯ ಮುಂಭಾಗಿಲಿನಿಂದ ಎದುರು ಇದ್ದ ರೂಮ್ ನಲ್ಲಿ ಅಲ್ಮೆರಾ ಇತ್ತು. ಪೊಲೀಸರು ಆ ಸಮಯದಲ್ಲಿ ನಾನು ಹೇಳಿದಂತಹ ಚಿನ್ನದ ಸರದ ತೂಕ ಮಾಡಿರುವುದಿಲ್ಲ. ಆದಿನ

ಠಾಣೆಯಿಂದ ಆರೋಪಿ ಮನಗೆ ಸಬ್ ಇನ್ಸ ಪೆಕ್ಟರ್, 4 ರಿಂದ 5 ಜನ ಪೊಲೀಸ್ ಸಿಬ್ಬಂಧಿಗಳು, ನಾನು, ಆರೋಪಿ ಹಾಗೂ ಮತ್ತೊಬ್ಬರು ಹೋಗಿದ್ದೇವು. ನಾವು ಸ್ಥಳಕ್ಕೆ ಸರ್ಕಾರಿ ವಾಹನದಲ್ಲಿ ಹೋಗಿದ್ದು ಅದರ ನೋಂದಣಿ ಸಂಖ್ಯೆ ಹೇಳಲು ಆಗುವುದಿಲ್ಲ. ನಾನು ಡಿಪ್ಲೋಮಾ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುತ್ತದೆ.

5. ನಿ.ಪಿ.6 ರಲ್ಲಿ ಬರೆದ ವಿಚಾರಗಳನ್ನು ತಿಳಿದುಕೊಂಡ ನಂತರ ಸಹಿ ಮಾಡಿರುತ್ತೇನೆ. ನಿ.ಪಿ.6 ಕ್ಕೆ ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಸದರಿ ಸ್ಥಳದಿಂದ ಠಾಣೆಗೆ ವಾಪಸ್ ಬಂದ ನಂತರ ನಿ.ಪಿ.6 ಅನ್ನು ಬೆರಳಚ್ಚು ಮಾಡಿ ನನ್ನ ಸಹಿ ಪಡೆದಿರುವುದಾಗಿ ನುಡಿದಿರುತ್ತಾರೆ. ನಿ.ಪಿ.6 ರಲ್ಲಿ ಪೊಲೀಸರು ನನ್ನನ್ನು ಬೆಳಿಗ್ಗೆ 11.00 ಗಂಟೆಗೆ ಠಾಣೆಗೆ ಬರಮಾಡಿಕೊಂಡಿರುವುದಾಗಿ ಬರೆದಿರುತ್ತದೆ ಎಂದರೆ ಸರಿ. ನಿ.ಪಿ.6 ರಲ್ಲಿ ಮಹಜರ್ ಅನ್ನು ದಿಃ26.12.2018 ರಂದು ಬೆಳಿಗ್ಗೆ 8.30 ರಿಂದ 10.00 ಗಂಟೆಯವರೆಗೆ ಸ್ಥಳದಲ್ಲಿ ಮಹಜರ್ ಮಾಡಿರುವುದಾಗಿ ಬರವಣಿಗೆ ಇರುತ್ತದೆ ಎಂದರೆ ಸರಿ. ಆದರೆ ಅದು ತಪ್ಪಾಗಿರುತ್ತದೆ. ಪೊಲೀಸರು ನನಗೆ ಮಾಹಿತಿ ನೀಡಿದ ಸ್ಥಳದಲ್ಲಿ ಯಾವುದೇ ನೊಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಯಾವುದೇ ಸಮಯದಲ್ಲಿ ನೊಡದೇ ಇದ್ದರೂ ಸಹ ಪೊಲೀಸರ ಒತ್ತಾಯದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

6. ನಿ.ಪಿ.6 ಮಹಜರ್ ಗೆ ಸಹಕರಿಸಿದ ನಂತರ ಪುನಃ ನಾನು ಠಾಣೆಗೆ ಹೋಗಿ ಹೇಳಿಕೆ ನೀಡಿದ್ದು ಎಷ್ಟು ದಿವಸದ ನಂತರ ಎಂದು ನನಗೆ ನೆನಪಿಲ್ಲ. ನಿ.ಪಿ.6 ಮಹಜರ್ ಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದು, ಆ ದಿನ ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಮಹಜರ್ ಅನ್ನು ಬೆಳಿಗ್ಗೆ 8.30 ರಿಂದ 10.00 ಗಂಟೆ ಸಮಯದಲ್ಲಿ ಮಾಡಿರುವುದಾಗಿ ಬರೆದಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.